# ಚಿಕ್ಕೋಡಿಯ ಕಹಳೆ ಕುಟುಂಬ



ರಿಯಾಜ್ ಕಲ್ಯೆಗಾರ



ಕಹಳೆ ತಯಾರಿಕೆಯಲ್ಲಿ ನಿರತ ಕಲ್ಯೆಗಾರ ಸಹೋದರರು

ಭಾರತೀಯ ಸಂಸ್ಕೃತಿ, ಧಾರ್ಮಿಕ ಪರಂಪರೆಯಲ್ಲಿ ಕೊಂಬು ಕಹಳೆಗೆ ವಿಶಿಷ್ಠ ಸ್ಥಾನವಿದೆ. ಜಾತ್ರೆ, ಉತ್ಸವ ಅಥವಾ ಮದುವೆ ಸಮಾರಂಭಗಳಲ್ಲಿ ಶುಭ ಸೂಚಕವೆಂದು ಬಳಲಾಗುತ್ತಿದೆ. ಈ ವಾದ್ಯವನ್ನು ತಯಾರಿಸುವ ಕಲೆಯನ್ನು ಬೆಳಗಾವಿ ಜಿಲ್ಲೆ ಚಿಕ್ಕೋಡಿ ಪಟ್ಟಣದ ಕುಟುಂಬವೊಂದು ಕಳೆದ ನಾಲ್ಕು ತಲೆಮಾರುಗಳಿಂದ ಅತ್ಯಂತ ಶ್ರದ್ಧೆಯಿಂದ ಮುಂದುವರೆಸಿಕೊಂಡು ಬರುತ್ತಿದೆ.

ಚಿಕ್ಕೋಡಿ ಪಟ್ಟಣದ ಝಾರಿಗಲ್ಲಿ ನಿವಾಸಿ ಅಬ್ದುಲ್ ಕರೀಂ ಹುಸೇನಸಾಬ್ ಕಲ್ಯೆಗಾರ ಕಹಳೆ ತಯಾರಿಕೆ ಕಲೆಯನ್ನು ಕರಗತ ಮಾಡಿಕೊಂಡು ತಮ್ಮ ಕುಟುಂಬಕ್ಕೆ ಬಳುವಳಿಯಾಗಿ ನೀಡಿದ್ದಾರೆ. ಕಳೆದ ನಾಲ್ಕು ತಲೆಮಾರುಗಳಿಂದ ಈ ಕುಟುಂಬ ಕಲೆಯನ್ನು ಜತನದಿಂದ ಜೋಪಾನ ಮಾಡುತ್ತಿದೆ. ಈಗ ಮೊಮ್ಮದ್ ರಿಯಾಜ್ ಕಲ್ಯೆಗಾರ ಮತ್ತು ಅವರ ಸಹೋದರರು ಈ ವೃತ್ತಿಯನ್ನು ಮುಂದುವರೆಸಿದ್ದಾರೆ. ಸಾಮಾನ್ಯವಾಗಿ ಹಿಂದು ಧಾರ್ಮಿಕ ಪರಂಪರೆಯಲ್ಲಿ ಹೆಚ್ಚಾಗಿ ಬಳಸಲಾಗುವ ಕಹಳೆಯನ್ನು ಮುಸ್ಲಿಂ ಕುಟುಂಬವೊಂದು ತಯಾರಿಸುತ್ತಿರುವುದು ವಿಶೇಷ.

ಆಳರಸರ ಕಾಲದಲ್ಲಿ ಕಹಳೆಯನ್ನು ರಣಕಹಳೆಯನ್ನಾಗಿ ಬಳಸಲಾಗುತ್ತಿತ್ತು. ಕೋಟೆಯ ಎತ್ತರದ ಬುರುಜಿನ ಮೇಲೆ ನಿಲ್ಲುತ್ತಿದ್ದ ಕಾವಲುಗಾರ ದೂರದಲ್ಲೇ ಶತ್ರುಗಳ ಆಗಮನವನ್ನು ಗುರುತಿಸಿ ಕೊಂಬು ಕಹಳೆ ಊದಿ ಕೋಟೆಗೊಳಗಿನ ಸೈನಿಕರನ್ನು ಎಚ್ಚರಗೊಳಿಸುತ್ತಿದ್ದ. ಯುದ್ಧ ಸಮಯದಲ್ಲೂ ಕೊಂಬು ಕಹಳೆ ದನಿ ಸೈನಿಕರಿಗೆ ಸ್ಫೂರ್ತಿಯಾಗಿತ್ತು. ಅದರಂತೆಯೇ ಮದುವೆ ಸಂದರ್ಭದಲ್ಲಿ ಗಂಡು ದೂರದಲ್ಲಿ ಬರುತ್ತಿದ್ದಾಗಲೇ ಕಹಳೆ ಊದಿ ಹೆಣ್ಣಿನ ಕಡೆಯವರಿಗೆ ಬೀಗರು ಬರುತ್ತಿದ್ದ ವಿಚಾರವನ್ನು ತಿಳಿಸಲಾಗುತ್ತಿತ್ತು.

ಈಗ ಕಹಳೆ ಬಳಕೆ ಕಡಿಮೆಯಾಗಿದ್ದರೂ ಉತ್ತರ ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿ ಧಾರ್ಮಿಕ, ಸಾಮಾಜಿಕ ಕಾರ್ಯಕ್ರಮಗಳಲ್ಲಿ, ಹಳ್ಳಿಗಳಲ್ಲಿ ನಡೆಯುವ ಜಾತ್ರೆ, ಉತ್ಸವದಲ್ಲಿ ಕಹಳೆ ಬಳಕೆಯಲ್ಲಿದೆ. ಕಹಳೆ ಊದುವ ವೃತ್ತಿಯನ್ನೇ ಕೆಲವು ಅವಲಂಬಿಸಿವೆ. ಕನ್ನಡದ ಕರಾವಳಿಯಲ್ಲಿ ಕೋಣಗಳನ್ನು ಓಡಿಸುವ ಜನಪ್ರಿಯ ಕ್ರೀಡೆ ಕಂಬಳದಲ್ಲೂ ಕೊಂಬು ಕಹಳೆಗಳಿಗೆ ವಿಶೇಷ ಸ್ಥಾನವಿದೆ. ಕೋಣಗಳು ಕೆಸರುಗದ್ದೆಯಲ್ಲಿ ಓಡುತ್ತಾ ಬರುವಾಗ ಕೊಂಬು ಊದಿ ಕೋಣಗಳಿಗೆ ಮತ್ತು ಆಯಾ ಕೋಣಗಳ ಬೆಂಬಲಿಗರಿಗೆ ಉತ್ಸಾಹ ತುಂಬುತ್ತಾರೆ.

ನಾಡಿನ ಬಹುತೇಕ ಹಳ್ಳಿಗಳಲ್ಲಿ ಬಳಕೆಯಲ್ಲಿರುವ ವಾದ್ಯಗಳ ಗುಂಪಿನಲ್ಲಿ ಕೊಂಬು ಕಹಳೆಗೆ ಅಗ್ರಸ್ಥಾನ. ಜಾತ್ರೆ ಉತ್ಸವಗಳಲ್ಲಿ ಎಲ್ಲಾ ವಾದ್ಯಗಳಿಗೂ ಮೊದಲು ಕೊಂಬು ಕಹಳೆ ಮೊಳಗಬೇಕು ಎಂಬುದು ರೂಢಿಯಾಗಿದೆ. ಇಂತಹ ವಿಶಿಷ್ಟ ಪರಂಪರೆ ಹೊಂದಿರುವ ಕಹಳೆ ತಯಾರಿಕೆ ಕಲೆ ಕಲ್ಯೆಗಾರ ಕುಟುಂಬಕ್ಕೆ ಕರಗತವಾಗಿದೆ.

ಹಿತ್ತಾಳೆಯ ಹಾಳೆಯಿಂದ ಕಹಳೆ ರೂಪಿಸಲು ವಿಶೇಷ ನಿಪುಣತೆ ಮತ್ತು ಪರಿಶ್ರಮ ಅಗತ್ಯ. ಕೊಂಬಿನಾಕಾರದ ಮಾರುದ್ದ ಕಹಳೆಯ ಹಿಂಬದಿಯ ತೂತಿನಲ್ಲಿ ದಮ್ಮು ಕಟ್ಟಿ ಉಸಿರು ಬಿಗಿ ಹಿಡಿದು ಊದಿದರೆ ಕರ್ಣಾನಂದ ಸ್ವರ ಹೊರಹೊಮ್ಮುತ್ತದೆ. ವಿಶೇಷವೆಂದರೆ ಕಹಳೆ ತಯಾರಿಸಲು ಯಾವುದೇ ಯಂತ್ರದ ಬಳಕೆ ಮಾಡಿಕೊಳ್ಳುವುದಿಲ್ಲ. ಹಿತ್ತಾಳೆಯ ಹಾಳೆಯನ್ನು ಬೇಕಾದ ಆಕಾರ ಮತ್ತು ಗಾತ್ರಕ್ಕೆ ತಗ್ಗಿಸಿ, ಬಗ್ಗಿಸಿ ಅತ್ಯಾಕರ್ಷಕವಾದ ಕಹಳೆ ತಯಾರಿಸುವುದಲ್ಲಿ ಕಲ್ಯೆಗಾರ ಸಹೋದರರು ಸಿದ್ಧಹಸ್ತರು. ಒಂದು ಕಹಳೆ ತಯಾರಿಕೆಗೆ ಮೂರು ದಿನ ದುಡಿಯಬೇಕು.

ಹಿತ್ತಾಳೆ, ತಾಮ್ರ ಮತ್ತು ಪಂಚಧಾತುವಿನ ಮಿಶ್ರಣದಿಂದ ತಯಾರಿಸಿದ ಈ ಜನಪದ ವಾದ್ಯವೊಂದಕ್ಕೆ ಮಾರುಕಟ್ಟೆಯಲ್ಲಿ ಸುಮಾರು 2,500 ದಿಂದ 3000 ರೂಪಾಯಿ ಬೆಲೆ ಸಿಗುತ್ತಿದೆ. ಶ್ರಮಕ್ಕೆ ಹೋಲಿಸಿದರೆ ಇದು ಅಷ್ಟೇನೂ ದೊಡ್ಡ ಮೊತ್ತವಲ್ಲ.

'ನಮಗೆ ಈ ವೃತ್ತಿಯಲ್ಲಿ ತೃಪ್ತಿ ಇದೆ. ಮುಂಬೈ, ಪುಣೆ, ಪಂಢರಪುರ, ಸಾಂಗ್ಲಿ, ಜತ್ ಸೇರಿದಂತೆ ಉತ್ತರ ಕರ್ನಾಟಕದ ವಿವಿಧೆಡೆಯಿಂದಲೂ ಬೇಡಿಕೆ ಇದೆ. ಪ್ರತಿ ತಿಂಗಳು ಸರಾಸರಿ 20ರಷ್ಟು ಕಹಳೆ ಮಾರಾಟವಾಗುತ್ತವೆ. ಕರ್ನಾಟಕಕ್ಕಿಂತ ಮಹಾರಾಷ್ಟ್ರದಲ್ಲಿ ಹೆಚ್ಚಿನ ಬೇಡಿಕೆ ಇದೆ. ಮುಂಬೈನ ಮಧ್ಯವರ್ತಿಗಳ ಮೂಲಕ ರಾಜಸ್ಥಾನ, ನೇಪಾಳಗಳಿಗೂ ಕಹಳೆ ಕಳಿಸುತ್ತೇವೆ' ಎನ್ನುತ್ತಾರೆ ರಿಯಾಜ್ ಕಲ್ಯೆಗಾರ.

'ನಮ್ಮ ಮಕ್ಕಳಿಗೂ ಕಹಳೆ ತಯಾರಿಸುವ ಕಲೆಯನ್ನು ಕಲಿಸುತ್ತಿದ್ದೇವೆ. ಇದರಲ್ಲಿ ಲಾಭ ನಷ್ಟದ ಪ್ರಶ್ನೆ ಇಲ್ಲ. ಜೀವನ ಸಾಗುತ್ತದೆ, ಸಾಕು. ನಮ್ಮ ಅಜ್ಜ ಮುತ್ತಜ್ಜರ ಕಾಲದಿಂದ ಬೆಳೆದು ಬಂದಿರುವ ಈ ಕಲಾ ಪರಂಪರೆಯನ್ನು ಮುಂದಿನ ಪೀಳಿಗೆಗೂ ಪರಿಚಯಿಸುವ ಪ್ರಯತ್ನ ಮಾಡುತ್ತಿದ್ದೇವೆ' ಎಂದೂ ರಿಯಾಜ್ ಹೆಮ್ಮೆ ವ್ಯಕ್ತಪಡಿಸುತ್ತಾರೆ.

ಪಾಶ್ಚಾತ್ಯ ವ್ಯಾಮೋಹದಿಂದ ಹಳ್ಳಿಗಳ ಬದುಕು ಯಾಂತ್ರಿಕವಾಗುತ್ತಿದೆ. ಆಧುನಿಕತೆಯ ಅಬ್ಬರದಲ್ಲಿ ಕಣ್ಮರೆಯಾಗುತ್ತಿರುವ ಕಹಳೆ ಎಂಬ ಜನಪದ ವಾದ್ಯವು ಪೂರ್ವಜರು ಬಿಟ್ಟು ಹೋಗಿರುವ ಅಪರೂಪದ ಕಲೆ. ರಾಜ ಮಹಾರಾಜರ ಆಸ್ಥಾನಗಳಲ್ಲಿ ಸ್ಥಾನಮಾನ ಪಡೆದಿದ್ದ ಕಹಳೆ, ಕೋಟೆ ಕಾಯುವ ಭಂಟರ ಕೈಯಲ್ಲಿರುತ್ತಿತ್ತು. ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ, ಜಾತ್ರೆ, ಉತ್ಸವ ಮುಂತಾದ ಮಂಗಳ ಕಾರ್ಯಕ್ರಮಗಳಲ್ಲಿ ಈ ಪರಿಕರ ಈಗ ಬಳಕೆಯಾಗುತ್ತಿದೆ. ಅದೇ ರೀತಿ ಬೇಡಿಕೆಯೂ ಇದೆ. ●